**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.177/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಹನುಮಂತಪ್ಪ |
| ತಂದೆಯ ಹೆಸರು | : | ಪಕೀರಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಚಾಲಕ ಕಮ್ ನಿರ್ವಾಹಕ, KSRTC |
| ವಾಸ ಸ್ಥಳ | : | ಹೊಸಮುಗಳಗೆರೆ, ಶಿಕಾರಿಪುರ ತಾಲ್ಲೂಕು |

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 10

ದಿ: 04-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

1. ಚಾಸಾ-1 ಮತ್ತು ಅವರ ಗಂಡ ಮೃತ ರಾಮಪ್ಪರವರ ಪರಿಚಯ ನನಗೆ ಇರುತ್ತದೆ. ಚಾಸಾ-5 ರಿಂದ 12 ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಚಾಸಾ-1 ಮತ್ತು ಅವರ ಕುಟುಂಬ ಹಾಗೂ ಆರೋಪಿತರು ಅಕ್ಕಪಕ್ಕದಲ್ಲಿದ್ದು ಕಾಡಜ್ಜಿ ಗ್ರಾಮದಲ್ಲಿ ಇರುತ್ತದೆ. ಮನೆ ಮತ್ತು ಜಾಗದ ವಿಚಾರವಾಗಿ ಆಗಾಗ ಅವರ ಮಧ್ಯೆ ಗಲಾಟೆಯಾಗುತ್ತಿತ್ತು. ಅದಕ್ಕಾಗಿ ನಾವು ಹೊಂದಾಣಿಕೆ ಮಾಡಿಕೊಂಡು ಹೋಗಿ ಅಂತ ಹಲವು ಬಾರಿ ಅವರಿಗೆ ಹೇಳಿ ಕಳುಹಿಸುತ್ತಾ ಇದ್ದೆವು. ಆದರೂ ಸಹ ಆರೋಪಿತರು ಮೃತ ರಾಮಪ್ಪ ಮತ್ತು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದರು.

2. ದಿಃ 12-06-2016 ರಂದು ರಾತ್ರಿ 9.30 ಗಂಟೆಗೆ ಆರೋಪಿತರು ಮೃತ ರಾಮಪ್ಪನಿಗೆ "ನೀನು ಯಾಕೆ ಬದುಕಿದ್ದೀಯಾ ಶಂಡ್ ನನ್ನ ಮಗನೇ" ಅಂತ ಅವಾಚ್ಯ ಶಬ್ದಗಳಿಂದ ಬೈದರು. ಆ ಕಾರಣದಿಂದ ರಾಮಪ್ಪರವರು ಕ್ರಿಮಿನಾಶಕ ಸೇವನೆ ಮಾಡಿ ಅಸ್ತವಸ್ಥ ಆಗಿದ್ದರು. . ನಂತರ ನಾನು, ಸುಶೀಲಮ್ಮ ಮತ್ತು ಇತರರು ರಾಮಪ್ಪರವರನ್ನು ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ದಾಖಲು ಮಾಡಿದೆವು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮಾರನೇ ದಿನ ಬೆಳಿಗ್ಗೆ 6.15 ಗಂಟೆಗೆ ರಾಮಪ್ಪರವರು ಮೃತಪಟ್ಟಿರುತ್ತಾರೆ. ಆರೋಪಿತರೇ ರಾಮಪ್ಪರವರ ಸಾವಿಗೆ ಕಾರಣ ಆಗಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.)

**ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ**:

3. ಚಾಸಾ-1, ಮೃತ ರಾಮಪ್ಪ, ಆರೋಪಿತರು ನನ್ನ ಸಂಬಂಧಿಕರು. ನಾನು 2013 ರಿಂದ 2019 ರವರೆಗೆ ಕಡೂರಿನಲ್ಲಿ ವಾಸವಿದ್ದೆ. ನಂತರ ಶಿಕಾರಿಪುರದಲ್ಲಿ ವಾಸವಿದ್ದೇನೆ. ನಾನು ಡ್ರೈವರ್ ಆಗಿದ್ದು ಸಮಾಜ ಸೇವೆ ಸಹ ಮಾಡುತ್ತೇನೆ. ಮೃತ ರಾಮಪ್ಪ ಮತ್ತು ಮೃತ 1 ನೇ ಆರೋಪಿ ಹೆಂಡತಿಯರು ಸ್ವಂತ ಅಕ್ಕತಂಗಿಯರು. ಚಾಸಾ-1 ರವರ ಗಂಡ ಮೃತ ರಾಮಪ್ಪರವರು ಜೀವನಾಂಶಕ್ಕಾಗಿ ಒಂದು ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಅವರು ಪ್ರತ್ಯೇಕವಾಗಿ ಒಂದು ಶಡ್ ನ್ನು ಹಾಕಿಕೊಂಡಿದ್ದರು ಅಂದರೆ ನಿಜ. ಚಾಸಾ-1 ಮತ್ತು ಅವರ ಮಗ ಚಾಸಾ-6 ರವರು ಮೃತ ರಾಮಪ್ಪರವರಿಗೆ ಬಹಳ ಕಿರುಕುಳ ಕೊಡುತ್ತಿದ್ದರು ಮತ್ತು ಮನೆಯಲ್ಲಿ ಇರಬಾರದು ಅಂತ ಹೇಳುತ್ತಿದ್ದರು ಅಂದರೆ ಸರಿಯಲ್ಲ.

4. ಆ ದಿನ ನಾನು ಕಡೂರಿನಿಂದ ಕೆಲಸ ಮುಗಿಸಿಕೊಂಡು ಮಧ್ಯಾಹ್ನ ಬಂದಿದ್ದೆ. ಬೆಳಿಗ್ಗೆ ನಾನು ಕಡೂರುನಿಂದ ಹೊರಟು ದಾವಣಗೆರೆ ತಲುಪಿದ್ದೆ. ನಾನು ಮೃತ ರಾಮಪ್ಪರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಆದರೆ ಆಸ್ಪತ್ರೆಗೆ ಹೋಗಿದ್ದೆ. ಮೌಖಿಕವಾಗಿ ನಮ್ಮ ಕಛೇರಿಯಲ್ಲಿ ಆ ದಿನದ

ರಜೆಯನ್ನು ಕೇಳಿದ್ದೆ. ಮೌಖಿಕವಾಗಿ ರಜೆಯನ್ನು ಸಂದರ್ಭ ಬಂದಲ್ಲಿ ಕೇಳಬಹುದು. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ನಾನು ಏನೂ ಹೇಳಿಕೆ ಕೊಟ್ಟಿದ್ದೇನೆ ಅಂತ ನನಗೆ ಗೊತ್ತಿದೆ. ಎಲ್ಲಾ ವಿಚಾರ ತದನಂತರದಲ್ಲಿ ಗೊತ್ತಾಗಿದೆ ಅಂತ ಹೇಳಿದ್ದೇನೆ ಅಂದರೆ ಸರಿಯಲ್ಲ.

5. ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಚಾಸಾ-1 ರವರೊಂದಿಗೆ ಹೋಗಿ ನಾನು ದೂರನ್ನು ಕೊಟ್ಟಿಲ್ಲ. ದೂರನ್ನು ನಾನು ಹೇಳಿ ಬರೆದು ಕೊಟ್ಟಿಲ್ಲ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿಲ್ಲ, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ರಾಮಪ್ಪರವರು ಅವರ ಹೆಂಡತಿ ಮತ್ತು ಮಕ್ಕಳ ಕಾಟದಿಂದ ಮೃತಪಟ್ಟಿರುತ್ತಾರೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.